ಕರ್ನಾಟಕ ಸರ್ಕಾರ

ಸಂಖ್ಯೆ: ಡಿಪಿಎಆರ್ 25 ಎಸ್‌ಎಂಆರ್ 2012

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 03.07.2014

## ಅಧಿಸೂಚನೆ

ದಿನಾಂಕ: 13.06.2014ರ ಅಧಿಸೂಚನೆ ಸಂಖ್ಯೆ: ಸಿಆಸುಇ 25 ಎಸ್‌ಎಂಆರ್ 2012ರಲ್ಲಿ ಪ್ರಕಟಿಸಿರುವ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) (ತಿದ್ದುಪಡಿ) ನಿಯಮಗಳು 2014ರ ಕರಡನ್ನು ಅಧಿಕೃತ ರಾಜ್ಯಪತ್ರದಲ್ಲಿ ಇದರ ಪ್ರಕಟಣೆಯ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಅದರಿಂದ ಬಾಧಿತರಾಗುವ ಸಂಭವವಿರುವ ಎಲ್ಲ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ ದಿನಾಂಕ: 13.06.2014ರ ಕರ್ನಾಟಕ ವಿಶೇಷ ರಾಜ್ಯ ಪತ್ರದ ಭಾಗ IV-ಎ, ಸಂಖ್ಯೆ: 377ರಲ್ಲಿ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮ 1978 (1990ರ ಕರ್ನಾಟಕ ಅಧಿನಿಯಮ 14) ರ 3ನೇ ಪ್ರಕರಣದ (2) ನೇ ಉಪ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ಪ್ರಕಟಿಸಲಾಗಿರುವುದರಿಂದ;

ಮತ್ತು ಸದರಿ ರಾಜ್ಯ ಪತ್ರವು ದಿನಾಂಕ: 13.06.2014ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ಸದರಿ ಕರಡಿನ ಮೇಲೆ ಯಾವುದೇ ಆಕ್ಷೇಪಣೆಗಳು/ಸಲಹೆಗಳು ರಾಜ್ಯ ಸರ್ಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಆದ್ದರಿಂದ, ಈಗ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮ 1978 (1990ರ ಕರ್ನಾಟಕ ಅಧಿನಿಯಮ 14) ರ 8ನೇ ಪ್ರಕರಣದೊಂದಿಗೆ ಓದಲಾದ, 3ನೇ ಪ್ರಕರಣದ (1) ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:-

## ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ:-** (1) ಈ ನಿಯಮಗಳನ್ನು ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) (ತಿದ್ದುಪಡಿ) ನಿಯಮಗಳು, 2014 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ನಿಯಮ 3 ರ ತಿದ್ದುಪಡಿ:-** ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು, 1963 (ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಿದೆ) ರ ನಿಯಮ 3, ಖಂಡ (ಹೆಚ್)ರ ಉಪ ಖಂಡ (V) ರಲ್ಲಿನ ಕೋಷ್ಟಕ ಹಾಗೂ ಇದರಲ್ಲಿನ ನಮೂದುಗಳ ಬದಲಾಗಿ ಕೆಳಕಂಡವುಗಳನ್ನು ಪ್ರತಿಸ್ಥಾಪಿಸತಕ್ಕದ್ದು:-

**ಕೋಷ್ಟಕ**

| | 2012ರ ವೇತನ ಶ್ರೇಣಿಗಳ ಪ್ರಕಾರ ಮೂಲವೇತನ | ಆಸ್ಪತ್ರೆಗಳಲ್ಲಿ ಅಥವಾ ಸ್ಯಾನಿಟೋರಿಯಗಳಲ್ಲಿನ ವಸತಿಯ ದರ್ಜೆ (ದಿನದ ಆಧಾರದ ಮೇಲೆ ಅನ್ವಯವಾಗುವ ದರಗಳು) |
|---|---|---|
| | 1 | 2 |
| | **1. ಎಲ್ಲಾ ಸರ್ಕಾರಿ/ವಿಶೇಷ ಆಸ್ಪತ್ರೆಗಳು ಸ್ಯಾನಿಟೋರಿಯಗಳನ್ನು ಒಳಗೊಂಡಂತೆ** | |
| 1 | ರೂ. 13,000 ಗಳನ್ನು ಮೀರದಂತೆ | ವಾಣಿವಿಲಾಸ ಆಸ್ಪತ್ರೆ, ಬೆಂಗಳೂರು, ಮಿಂಟೋ ಆಸ್ಪತ್ರೆ, ಬೆಂಗಳೂರು, ಚೆಲುವಾಂಬ ಆಸ್ಪತ್ರೆ, ಮೈಸೂರು, ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ ಈ ಆಸ್ಪತ್ರೆಗಳಲ್ಲಿ ಸಾಮಾನ್ಯ ದರ್ಜೆಯ ವಾರ್ಡ್‌ಗಳು ಅಥವಾ ರೂ. 30ರ ವಾರ್ಡ್‌ಗಳು ಅಥವಾ ರೂ. 50ರ ವಾರ್ಡ್‌ಗಳು. |
| 2 | ರೂ. 13,000 ಕ್ಕೆ ಹೆಚ್ಚಿನ ಆದರೆ ರೂ. 19,000 ಗಳನ್ನು ಮೀರದಂತೆ | ರೂ. 30ರ ಅಥವಾ ಮೇಲ್ಪಟ್ಟ ಯಾವುದೇ ವಾರ್ಡ್‌ಗಳು ಮತ್ತು ರೂ. 50ರ ಒಳಪಟ್ಟ ವಾರ್ಡ್‌ಗಳು. |
| 3 | ರೂ. 19,000 ಕ್ಕೆ ಹೆಚ್ಚಿನ ಆದರೆ ರೂ. 28,800 ಗಳನ್ನು ಮೀರದಂತೆ | ರೂ. 50ರ ಅಥವಾ ಮೇಲ್ಪಟ್ಟ ಯಾವುದೇ ವಾರ್ಡ್‌ಗಳು ಮತ್ತು ರೂ. 75ರ ಒಳಪಟ್ಟ ವಾರ್ಡ್‌ಗಳು. |
| 4 | ರೂ. 28,800 ಕ್ಕೆ ಹೆಚ್ಚಿನ ಆದರೆ ರೂ. 33,600 ಗಳನ್ನು ಮೀರದಂತೆ | ರೂ. 100ರ ಅಥವಾ ಮೇಲ್ಪಟ್ಟ ಯಾವುದೇ ವಾರ್ಡ್‌ಗಳು ಮತ್ತು ರೂ. 150ರ ಒಳಪಟ್ಟ ವಾರ್ಡ್‌ಗಳು. |
| 5 | ರೂ. 33,600 ಕ್ಕೆ ಮೇಲ್ಪಟ್ಟು | ರೂ. 150ರ ವಾರ್ಡ್‌ಗಳು ಅಥವಾ ರೂ. 150ರ ಮೇಲ್ಪಟ್ಟ ಯಾವುದಾದರೂ ವಾರ್ಡ್‌ಗಳು. |

**3. ನಿಯಮ 8 ರ ತಿದ್ದುಪಡಿ:-** ಈ ನಿಯಮಾವಳಿಯ ನಿಯಮ 3 ರ ಉಪ ನಿಯಮ (3) ರ ಪರಂತುಕದಲ್ಲಿನ ಕೋಷ್ಟಕಕ್ಕೆ ಕೆಳಕಂಡವುಗಳನ್ನು ಪ್ರತಿಸ್ಥಾಪಿಸತಕ್ಕದ್ದು:-

**ಕೋಷ್ಟಕ**

| | ವೇತನದ ಹಂತ | ವಾರ್ಡ್‌ಗಳ ವರ್ಗ/ಯಾವ ವರ್ಗದ ವಾರ್ಡ್‌ಗೆ ಅರ್ಹತೆ ಇರುವುದು | ಅರ್ಹತೆ ಇರುವ ವಾರ್ಡ್‌ನ ಗರಿಷ್ಠ ದರ/ರೂಂ ಬಾಡಿಗೆ |
|---|---|---|---|
| | 1 | 2 | 3 |
| i) | ಮಾಹೆಯಾನ ರೂ. 16,000/- ರವರೆಗೆ | ಸಾಮಾನ್ಯ ವಾರ್ಡ್ | ದಿನ ಒಂದಕ್ಕೆ ರೂ. 500/- |
| ii) | ಮಾಹೆಯಾನ ರೂ. 16,000/- ರಿಂದ ರೂ. 43,200/- ರವರೆಗೆ | ಅರೆ ಖಾಸಗಿ ವಾರ್ಡ್ | ದಿನ ಒಂದಕ್ಕೆ ರೂ. 1500/- |
| iii) | ಮಾಹೆಯಾನ ರೂ. 43,200/- ಮತ್ತು ಹೆಚ್ಚಿನ | ಖಾಸಗಿ ವಾರ್ಡ್ | ದಿನ ಒಂದಕ್ಕೆ ರೂ. 2000/- |

. . . . 3

4. **ನಿಯಮ 14 ರ ತಿದ್ದುಪಡಿ:-** ಈ ನಿಯಮಾವಳಿಯ ನಿಯಮ 14 ರ ಉಪ ನಿಯಮ (2) ರಲ್ಲಿ,-

**(ಅ)** ಖಂಡ (ಐ) ನಲ್ಲಿ, **"ಗರಿಷ್ಠ ಮೊತ್ತ ಒಂದು ನೂರು ರೂಪಾಯಿಗಳು"** ಎಂಬ ಪದಗಳು ಮತ್ತು ಅಂಕಿಗಳ ಬದಲಾಗಿ **"ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಕೇಂದ್ರ ಸರ್ಕಾರದ ಆರೋಗ್ಯ ಸೇವೆಗಳ (CGHS) ಅಡಿಯಲ್ಲಿ ಕಾಲಕಾಲಕ್ಕೆ ನಿಗದಿಪಡಿಸುವ ದರದಂತೆ"** ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತಿಸ್ಥಾಪಿಸತಕ್ಕದ್ದು.

**(ಆ)** ಖಂಡ (ಜೆ) ನಲ್ಲಿ, **"ಕರ್ನಾಟಕ ಸಿವಿಲ್ ಸೇವೆಗಳು (ಪರಿಷ್ಕೃತ ವೇತನ) ನಿಯಮಗಳು, 2007ರ ಅನುಸಾರವಾಗಿ ರೂ. 15,600/-"** ಎಂಬ ಪದಗಳು ಮತ್ತು ಅಂಕಿಗಳ ಬದಲಾಗಿ **"ಕರ್ನಾಟಕ ಸಿವಿಲ್ ಸೇವೆಗಳು (ಪರಿಷ್ಕೃತ ವೇತನ) ನಿಯಮಗಳು, 2012ರ ಅನುಸಾರವಾಗಿ ರೂ. 31,200/-"** ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತಿಸ್ಥಾಪಿಸತಕ್ಕದ್ದು.

**(ಇ)** ಖಂಡ (ಎಲ್) ನಲ್ಲಿ, **"ಕ್ಲೇಮು ಮಾಡುವ ಗರಿಷ್ಠ ಮೊತ್ತವು ಪ್ರತೀ ಪ್ರಕರಣದಲ್ಲೂ ಮೂರು ನೂರು ರೂಪಾಯಿಗಳನ್ನು ಮೀರಬಾರದು ಎಂಬ ಷರತ್ತಿಗೊಳಪಟ್ಟು ಸರ್ಕಾರಿ ನೌಕರನ ಇಡೀ ಸೇವಾವಧಿಯಲ್ಲಿ ಮೂರು ಬಾರಿ ಅನುಮತಿಸತಕ್ಕದ್ದು"** ಎಂಬ ಪದಗಳು ಮತ್ತು ಅಂಕಿಗಳ ಬದಲಾಗಿ **"ಕ್ಲೇಮು ಮಾಡುವ ಗರಿಷ್ಠ ಮೊತ್ತವು ಪ್ರತೀ ಪ್ರಕರಣದಲ್ಲೂ ಆರು ನೂರು ರೂಪಾಯಿಗಳನ್ನು ಮೀರಬಾರದು ಎಂಬ ಷರತ್ತಿಗೊಳಪಟ್ಟು ಸರ್ಕಾರಿ ನೌಕರನ ಇಡೀ ಸೇವಾವಧಿಯಲ್ಲಿ ಐದು ಬಾರಿ ಅನುಮತಿಸತಕ್ಕದ್ದು"** ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತಿಸ್ಥಾಪಿಸತಕ್ಕದ್ದು.

**(ಈ)** ಖಂಡ (ಎಂ) ನಲ್ಲಿ, **"ಕರ್ನಾಟಕ ಸಿವಿಲ್ ಸೇವೆಗಳು (ಪರಿಷ್ಕೃತ ವೇತನ) ನಿಯಮಗಳು, 2007ರ ಅನುಸಾರವಾಗಿ ರೂ. 15,600/-"** ಎಂಬ ಪದಗಳು ಮತ್ತು ಅಂಕಿಗಳ ಬದಲಾಗಿ **"ಕರ್ನಾಟಕ ಸಿವಿಲ್ ಸೇವೆಗಳು (ಪರಿಷ್ಕೃತ ವೇತನ) ನಿಯಮಗಳು, 2012ರ ಅನುಸಾರವಾಗಿ ರೂ. 31,200/-"** ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತಿಸ್ಥಾಪಿಸತಕ್ಕದ್ದು.

5. **ನಿಯಮ 23 ರ ತಿದ್ದುಪಡಿ:-** ಈ ನಿಯಮಾವಳಿಯ ನಿಯಮ 23 ರ ಉಪ ನಿಯಮ (2) ರಲ್ಲಿ, **"ಕರ್ನಾಟಕ ಸಿವಿಲ್ ಸೇವೆಗಳು (ಪರಿಷ್ಕೃತ ವೇತನ) ನಿಯಮಗಳು, 2007ರ ಅನುಸಾರವಾಗಿ ರೂ. 15,600/-"** ಎಂಬ ಪದಗಳು ಮತ್ತು ಅಂಕಿಗಳ ಬದಲಾಗಿ **"ಕರ್ನಾಟಕ ಸಿವಿಲ್ ಸೇವೆಗಳು (ಪರಿಷ್ಕೃತ ವೇತನ) ನಿಯಮಗಳು, 2012ರ ಅನುಸಾರವಾಗಿ ರೂ. 31,200/-"** ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತಿಸ್ಥಾಪಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಡಿ. ನಾಗೇಶ್ ಪಾಟಿಕ್)**
ಸರ್ಕಾರದ ಉಪ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾನಿಯಮಗಳು-2)

<u>ಗೆ:</u>

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು- ಇವರಿಗೆ ವಿಶೇಷ ರಾಜ್ಯ ಪತ್ರದ ಸಂಚಿಕೆಯಲ್ಲಿ ಪ್ರಕಟಿಸಲು ಹಾಗೂ ಅದರ 500 ಪ್ರತಿಗಳನ್ನು ಸರ್ಕಾರದ ಉಪ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, (ಸೇವಾನಿಯಮಗಳು-2), ಕೊಠಡಿ ಸಂಖ್ಯೆ: 30, ವಿಧಾನ ಸೌಧ, ಬೆಂಗಳೂರು-560 001 ಇವರಿಗೆ ಒದಗಿಸಲು.

. . . . 4

**<u>ಇವರಿಗೆ:</u>**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
4. ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿ, ರಾಜಭವನ, ಬೆಂಗಳೂರು.
5. ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
6. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
7. ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಮಂಡಲ, ವಿಧಾನ ಸೌಧ, ಬೆಂಗಳೂರು
8. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ಪರಿಷತ್ತು, ವಿಧಾನ ಸೌಧ, ಬೆಂಗಳೂರು
9. ಎಲ್ಲಾ ಇಲಾಖಾ ಮುಖ್ಯಸ್ಥರು.
10. ಎಲ್ಲಾ ಪ್ರಾದೇಶಿಕ ಆಯುಕ್ತರು.
11. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು/ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್.
12. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು.
13. ಮಹಾ ನಿಬಂಧಕರು, ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು.
14. ನಿಬಂಧಕರು, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಕಂದಾಯ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009.
15. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
16. ನಿಬಂಧಕರು, ಕರ್ನಾಟಕ ಮೇಲ್ಮನವಿ ಪ್ರಾಧಿಕಾರ, ಬೆಂಗಳೂರು.
17. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
18. ರಾಜ್ಯದ ಜಿಲ್ಲಾ ಆಸ್ಪತ್ರೆಗಳ ಎಲ್ಲಾ ಜಿಲ್ಲಾ ವೈದ್ಯಾಧಿಕಾರಿಗಳು.
19. ಸರ್ಕಾರದ ಎಲ್ಲಾ ಅಪರ/ಜಂಟಿ/ಉಪ/ಅಧೀನ ಕಾರ್ಯದರ್ಶಿಗಳು.
20. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು.
21. ಶಾಖಾ ರಕ್ಷಾ ಕಡತ/ಬಿಡಿ ಪ್ರತಿಗಳು.

*ವಿ.ಸೂ. :- ಈ ಅಧಿಸೂಚನೆಯು ಅಧಿಸೂಚನೆ ಸಂಖ್ಯೆ: ಡಿಪಿಎಆರ್ 25 ಎಸ್‌ಎಂಆರ್ 2012, ದಿನಾಂಕ: 03.06.2014ರ ಕನ್ನಡಾನುವಾದವಾಗಿದೆ.*